www.shikarat.com

# Model Question Paper-7

1) ಈ ಕೆಳಗಿನ ಜೋಡಣೆಗಳಲ್ಲಿ (ಪವಿತ್ರ ವೃಕ್ಷ – ಬುಡಕಟ್ಟು ಜನಾಂಗ) ತಪ್ಪಾದುದನ್ನು ಗುರ್ತಿಸಿ.
ಎ) ಮಹುವಾ ಮರ – ಮುಂಡಾ
ಬಿ) ಕದಂಬ ಮರ – ಸಂತಾಲರು
ಸಿ) ಹುಣಸೆ ವೃಕ್ಷ – ಭಿಲ್ಲರು
ಡಿ) ಪೀಪಲ್ ಮರ – ಭಾರತದ ಹಲವೆಡೆ

2) ಕೆಳಗಿನ ಯಾವ ಜೋಡಿ ರಾಜ್ಯಗಳು ನೇಪಾಳ & ಭೂತಾನ್ ಎರಡರೊಂದಿಗೂ ತಮ್ಮ ಗಡಿಯನ್ನು ಹಂಚಿಕೊಳ್ಳುತ್ತವೆ?
ಎ) ಸಿಕ್ಕಿಂ & ಅಸ್ಸಾಂ ಬಿ) ಸಿಕ್ಕಿಂ & ಪ. ಬಂಗಾಳ
ಸಿ) ಅರುಣಾಚಲ ಪ್ರದೇಶ
ಡಿ) ಬಿಹಾರ & ಪ. ಬಂಗಾಳ

3) ಕೆಳಗಿನ ಯಾವ ಬೆಟ್ಟಗಳು ಪೂರ್ವ ಘಟ್ಟದಲ್ಲಿವೆ?
ಎ) ಪಳನಿ ಬೆಟ್ಟಗಳು ಬಿ) ಏಲಕ್ಕಿ ಬೆಟ್ಟಗಳು
ಸಿ) ಕಲ್ವರಾಯನ ಬೆಟ್ಟಗಳು
ಡಿ) ನೀಲಗಿರಿ ಬೆಟ್ಟಗಳು

4) ಭಿಲಾಯ್ ಉಕ್ಕಿನ ಸ್ಥಾವರ ಭಾರತ & ಯಾವ ರಾಷ್ಟ್ರದ ಸಹಯೋಗದ ಯೋಜನೆಯಾಗಿದೆ?
ಎ) ರಷ್ಯಾ ಬಿ) ಬ್ರಿಟನ್
ಸಿ) ಜರ್ಮನಿ ಡಿ) ಪೋಲೆಂಡ್

5) ಕೆಳಗಿನವುಗಳಲ್ಲಿ ಯಾವ ಒಂದು ಸಂವಿಧಾನ ತಿದ್ದುಪಡಿಗೆ ವಿಶೇಷ ಬಹುಮತ & ಅರ್ಧಕ್ಕಿಂತ ಹೆಚ್ಚು ರಾಜ್ಯಗಳ ಒಪ್ಪಿಗೆ ಬೇಕಾಗುತ್ತದೆ?
1. ರಾಷ್ಟ್ರಪತಿ ಚುನಾವಣೆ ರೀತಿ ಬದಲಾವಣೆ
2. 368ನೇ ವಿಧಿ
3. ರಾಷ್ಟ್ರಪತಿಗಳ, ನ್ಯಾಯಾಧೀಶರ ವೇತನ & ಭತ್ಯೆ
4. ಸುಪ್ರೀಂಕೋರ್ಟ್ & ಹೈಕೋರ್ಟ್
5. ಕೇಂದ್ರ & ರಾಜ್ಯ ಸರ್ಕಾರಗಳ ಕಾರ್ಯಾಂಗೀಯ ಅಧಿಕಾರ

ಆಯ್ಕೆಗಳು :
ಎ) 1, 2, 3, 4 & 5 ಬಿ) 2, 4 & 5
ಸಿ) 1, 3, 4 & 5 ಡಿ) 1, 2, 4 & 5

6) ಒಂದು ನಿರ್ದಿಷ್ಟ ವಿಷಯದ ಬಗ್ಗೆ ಭಾರತ ಸರ್ಕಾರವು ಹೊರಡಿಸಿರುವ ಅಧಿಕೃತ ಪತ್ರ.........?
ಎ) ಜಂಟಿ ಪತ್ರ ಬಿ) ಶ್ವೇತ ಪತ್ರ
ಸಿ) ಹಳದಿ ಪತ್ರ ಡಿ) ಹಸಿರು ಪತ್ರ

7) ಭಾರತದಲ್ಲಿ ಎಷ್ಟು ವಿಶ್ವ ಯುನೆಸ್ಕೋ ಪಾರಂಪರಿಕ ತಾಣಗಳಿವೆ?
ಎ) 40 ಬಿ) 47
ಸಿ) 44 ಡಿ) 48

8) MS-Word ನಲ್ಲಿ ಕಾಗುಣಿತ ಪರಿಶೀಲನೆಗಾಗಿ ಯಾವ ಸ್ವಯಂಚಾಲಿತ ಕಾರ್ಯಾಕಾರಿ ಕೀಲಿಯನ್ನು ಬಳಸಲಾಗುತ್ತದೆ?
ಎ) F1 ಬಿ) F3
ಸಿ) F5 ಡಿ) F7

9) Encoding ಹಾಗೂ Decoding ಮೆಸೇಜ್‌ಗಳ ಟೆಕ್ನಿಕ್‌ನ್ನು ಏನೆಂದು ಕರೆಯುತ್ತಾರೆ?
ಎ) ಬಯೋಗ್ರಫಿ ಬಿ) ಕ್ರಿಪ್ಟೋಗ್ರಾಫಿ
ಸಿ) ಮೆನೋಗ್ರಾಫಿ ಡಿ) ಡೆಮೋಗ್ರಾಫಿ

10) 'ರೆಫ್ರಿಜರೇಟರ್‌ನಲ್ಲಿ ಆಹಾರ ಕೆಡದೆ ಇರುವುದಕ್ಕೆ ಕಾರಣ ಏನು?
ಎ) ಕಡಿಮೆ ತಾಪಮಾನದಲ್ಲಿ ಬ್ಯಾಕ್ಟೀರಿಯಾ ಹಾಗೂ ಮೋಲ್ಡ್ ಜೀವಿಗಳು ನಿಷ್ಕ್ರೀಯವಾಗಿರುತ್ತವೆ.
ಬಿ) ಕಡಿಮೆ ತಾಪಮಾನದಲ್ಲಿ ಸೂಕ್ಷ್ಮ ಜೀವಿಗಳು ಸಾಯುತ್ತವೆ.
ಸಿ) ಕಡಿಮೆ ತಾಪಮಾನದಲ್ಲಿ ಸೂಕ್ಷ್ಮ ಜೀವಿಗಳು ಹೆಪ್ಪುಗಟ್ಟುತ್ತವೆ.
ಡಿ) ಇದು ಆಹಾರವನ್ನು ಕ್ರಿಮಿ ಶುದ್ಧಿಗೊಳಿಸುತ್ತದೆ.

11) "ಸುರ್ತಿ" ಯಾವುದರ ತಳಿಯಾಗಿದೆ?
ಎ) ದನಕರು ಬಿ) ಎಮ್ಮೆ
ಸಿ) ಕುರಿ ಡಿ) ಆಡು

CHIGURU COMPETITIVE COACHING INSTITUTE
CHIGURU
DHARWAD

12) ಮರೀಚಿಕೆ (ಬಿಸಿಲ್ಗುದುರೆ) ಕಾಣಿಸಿಕೊಳ್ಳಲು ಕಾರಣ?
ಎ) ವಾತಾವರಣದಲ್ಲಿನ ವಿಭಿನ್ನ ಭಾಗಗಳ ಅಸಮತೋಲನದ ತಾಪಮಾನ
ಬಿ) ವಾತಾವರಣದ ಮೇಲಾಗುವ ಆಯಸ್ಕಾಂತೀಯ ಪ್ರಕ್ಷುಬ್ಧತೆ
ಸಿ) ವಾತಾವರಣದಲ್ಲಿರುವ ಓಜೋನ್ ಪದರದ ಸವೆತ
ಡಿ) ವಾತಾವರಣದಲ್ಲಿರುವ ವಿಭಿನ್ನ ಭಾಗಗಳ ಸಮತೋಲನದ ತಾಪಮಾನ

13) ದಂಡಕಾಂತದ ಕೇಂದ್ರದಲ್ಲಿನ ಕಾಂತವು..........?
ಎ) ಅತ್ಯಧಿಕವಾಗಿರುತ್ತದೆ
ಬಿ) ಕನಿಷ್ಠವಾಗಿರುತ್ತದೆ ಸಿ) ಶೂನ್ಯವಾಗಿರುತ್ತದೆ
ಡಿ) ಅತ್ಯಧಿಕ / ಕನಿಷ್ಠವಾಗಿರುತ್ತದೆ

14) ಶಾಹೂ ಮಹಾರಾಜ & ಡಾ// ಬಿ.ಆರ್. ಅಂಬೇಡ್ಕರ್‌ರವರು ಕೆಳಗಿನ ಯಾರ ಬೋಧನೆಗಳಿಂದ ಪ್ರಭಾವಿತರಾಗಿದ್ದರು?
ಎ) ರಾಜಾರಾಂ ಮೋಹನ್‌ರಾಯ್
ಬಿ) ಸ್ವಾಮಿ ವಿವೇಕಾನಂದರು
ಸಿ) ಎಂ.ಜಿ. ರಾನಡೆ ಡಿ) ಜ್ಯೋತಿಭಾ ಫುಲೆ

15) ಎರಡನೇ ಮಹಾಯುದ್ಧದಲ್ಲಿ ಯುಎಸ್ಎ ಭಾಗವಹಿಸಲು ಕಾರಣ?
ಎ) ಪೋಲೆಂಡಿನ ಮೇಲೆ ಹಿಟ್ಲರ್‌ನ ದಾಳಿ
ಬಿ) ಮಂಚೂರಿಯಾವನ್ನು ಜಪಾನ್ ವಶಪಡಿಸಿಕೊಂಡದ್ದು
ಸಿ) ಪರ್ಲ್‌ಹಾರ್ಬರ್ ಮೇಲೆ ಜಪಾನ್ ದಾಳಿ
ಡಿ) ಬ್ರಿಟನ್ & ಫ್ರಾನ್ಸ್‌ಗಳು ಜರ್ಮನಿಯ ಮೇಲೆ ಯುದ್ಧ ಘೋಷಿಸಿದ್ದು

16) ರುದ್ರಭಟ್ಟನು ರಚಿಸಿದ ಕೃತಿಯ ಹೆಸರೇನು?
ಎ) ಜಗನ್ನಾಥ ವಿಜಯ ಬಿ) ಮಿತಾಕ್ಷರ ಸಂಹಿತೆ
ಸಿ) ಲೋಕೋಪಕಾರ ಡಿ) ಯಶೋಧರ

17) ಯಾವ ಮೊಘಲ್ ಚಕ್ರವರ್ತಿಯು ತಂಬಾಕು ಸೇವನೆಯನ್ನು ನಿಷೇಧಿಸಿದನು?
ಎ) ಬಾಬರ್ ಬಿ) ಜಹಾಂಗೀರ್
ಸಿ) ಔರಂಗಜೇಬ್ ಡಿ) ಮಹಮ್ಮದ್ ಷಾ



Scanned with CamScanner

www.shikarat.com



18) 1610 ರಲ್ಲಿ ಶ್ರೀರಂಗ ಪಟ್ಟಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ ಮೈಸೂರಿನ ದೊರೆ ಯಾರು?
ಎ) ಚಿಕ್ಕದೇವರಾಯ ಬಿ) ರಾಜ ಒಡೆಯರ್
ಸಿ) ದೊಡ್ಡದೇವರಾಯ ಡಿ) ಕೃಷ್ಣರಾಜ–1

19) ಟೇಬಲ್ ಶುಗರ್ ಎಂದು ಕರೆಯಲ್ಪಡುವುದು?
ಎ) ಗ್ಲುಕೋಸ್ ಬಿ) ಫ್ರುಕ್ಟೋಸ್
ಸಿ) ಸೆಲ್ಯುಲೋಸ್ ಡಿ) ಸುಕ್ರೋಸ್

20) ಕೆರೆಮನೆ ಮೇಳ ಯಾವ ಕಲೆಗೆ ಸಂಬಂಧಿಸಿದೆ?
ಎ) ವೀರಗಾಸೆ ಬಿ) ಹುತ್ತರಿ
ಸಿ) ಕುಚಿಪ್ಪುಡಿ ಡಿ) ಯಕ್ಷಗಾನ

21) ಭಾರತ ಪರ್ಯಾಯ ದ್ವೀಪದ ಹೆಚ್ಚಿನ ಪ್ರದೇಶವನ್ನು ಕೋಪ್ಪೆನ್ (Koeppen) ವಾಯುಗುಣ ವ್ಯವಸ್ಥೆಯ ಯಾವ ಪ್ರಕಾರದಡಿಯಲ್ಲಿ ಗುಂಪು ಮಾಡಲಾಗಿದೆ?
ಎ) Af ಬಿ) BSh
ಸಿ) Cfb ಡಿ) Am

22) ಕೆಳಗಿನವುಗಳಲ್ಲಿ ಯಾವುದು ಭಾರತೀಯ ನಗರಗಳ ಸಾಮಾನ್ಯ ವಾರ್ಷಿಕ ಮಳೆಯ ಇಳಿಕೆಯ ಕ್ರಮದಲ್ಲಿ ಸರಿಯಾದ ಅನುಕ್ರಮವಾಗಿದೆ?
ಎ) ಕೊಚ್ಚಿ – ಕೋಲ್ಕತ್ತಾ – ದೆಹಲಿ – ಪಾಟ್ನಾ
ಬಿ) ಕೋಲ್ಕತ್ತಾ – ಕೊಚ್ಚಿ – ಪಾಟ್ನಾ – ದೆಹಲಿ
ಸಿ) ಕೊಚ್ಚಿ – ಕೋಲ್ಕತ್ತಾ – ಪಾಟ್ನಾ – ದೆಹಲಿ
ಡಿ) ಕೋಲ್ಕತ್ತಾ – ಕೊಚ್ಚಿ – ದೆಹಲಿ – ಪಾಟ್ನಾ

23) ಕೆಳಗಿನ ಯಾವ ಸಸ್ಯಗಳು ಉಸಿರಾಟದ ಬೇರುಗಳನ್ನು ಹೊಂದಿವೆ?
ಎ) ಜವುಗು ಸಸ್ಯಗಳು ಬಿ) ಮ್ಯಾಂಗ್ರೋವ್ಸ್
ಸಿ) ಎಪಿಫೈಟ್ಸ್ ಡಿ) ಹೈಡ್ರೋಫೈಟ್ಸ್

24) ಪಗ್ಲಾಡಿಯಾ ಆಣೆಕಟ್ಟು ಕೆಳಗಿನ ಯಾವ ರಾಜ್ಯದಲ್ಲಿದೆ?
ಎ) ಅಸ್ಸಾಂ ಬಿ) ಜಾರ್ಖಂಡ್
ಸಿ) ಬಿಹಾರ ಡಿ) ತಮಿಳುನಾಡು

25) 9° ಡಿಗ್ರಿ ಚಾನೆಲ್ ............ ಪ್ರತ್ಯೇಕಿಸುತ್ತದೆ?
ಎ) ಲಕ್ಷದ್ವೀಪದಿಂದ ಮಿನಿಕಾಯ್
ಬಿ) ಮಿನಿಕಾಯ್ & ಮಾಲ್ಡೀವ್ಸ್
ಸಿ) ಅಂಡಮಾನ್ & ನಿಕೋಬಾರ್
ಡಿ) ಇಂದಿರಾಪಾಯಿಂಟ್ & ಇಂಡೋನೇಷ್ಯಾ

CHIGURU COMPETITIVE COACHING INSTITUTE
CHIGURU
DHARWAD

26) ಸೌರವ್ಯೂಹದ ಕೆಳಗಿನ ಯಾವ ಗ್ರಹವು ದೀರ್ಘಾವಧಿ ದಿನವನ್ನು ಹೊಂದಿದೆ?
ಎ) ಬುಧ ಬಿ) ಗುರು
ಸಿ) ಶುಕ್ರ ಡಿ) ಭೂಮಿ

27) ಯಾವ ನದಿದಂಡೆಯಲ್ಲಿ ಲೂಧಿಯಾನಾ ನಗರವಿದೆ?
ಎ) ಬಿಯಾಸ್ ಬಿ) ರಾವಿ
ಸಿ) ಸಟ್ಲೇಜ್ ಡಿ) ಲೂನಿ

28) ಕೆಳಗಿನ ಯಾವ ಸಮಿತಿಯ ಶಿಫಾರಸ್ಸಿನ ಮೇರೆಗೆ ರೇಲ್ವೆ ಬಜೆಟ್‌ನ್ನು 1921 ರಲ್ಲಿ ಕೇಂದ್ರ ಬಜೆಟ್‌ನಿಂದ ಪ್ರತ್ಯೇಕಿಸಲಾಯಿತು ?
ಎ) ಹಿಲ್ಟನ್ ಯಂಗ್ ಸಮಿತಿ
ಬಿ) ಕಾಮರಾಜನ್ ಸಮಿತಿ
ಸಿ) ವ್ಹಿಟ್ಲೆ ಸಮಿತಿ ಡಿ) ಆ್ಯಕ್‌ವರ್ತ್ ಸಮಿತಿ

29) ಕೆಳಗಿನ ಹೇಳಿಕೆ ಗಮನಿಸಿ.
1. ಹಣದುಬ್ಬರವು ವಿದೇಶಿ & ದೇಶೀಯ ಕರೆನ್ಸಿಯ ಮೌಲ್ಯದ ಮೇಲೆ ಧನಾತ್ಮಕ ಪರಿಣಾಮ ಬೀರುತ್ತದೆ.
2. ಹಣದುಬ್ಬರವು ಬಡ್ಡಿದರದಿಂದ ಸ್ವತಂತ್ರವಾದುದ್ದಾಗಿದೆ.

ತಪ್ಪಾದ ಹೇಳಿಕೆಗಳನ್ನು ಗುರ್ತಿಸಿ.
ಎ) 1 ಮಾತ್ರ ಬಿ) 2 ಮಾತ್ರ
ಸಿ) 1 & 2 ಡಿ) ಯಾವುದು ಅಲ್ಲ

30) ಕೆಳಗಿನ ಯಾವ ವಕ್ರರೇಖೆಯು "ಆರ್ಥಿಕತೆಯಲ್ಲಿ ನಿರುದ್ಯೋಗವನ್ನು ಕಡಿಮೆ ಮಾಡುತ್ತದೆ, ಹಾಗೂ ಹಣದುಬ್ಬರವನ್ನು ಹೆಚ್ಚಿಸುತ್ತದೆ" ಎಂದು ತಿಳಿಸುತ್ತದೆ?
ಎ) ಗಿನಿ ಕೋ–ಎಫಿಸಿಯೆಂಟ್
ಬಿ) ವರ್ಡೋರ್ನ್ ನಿಯಮ
ಸಿ) ಗಿಬ್ರಾಟ್‌ನ ನಿಯಮ ಡಿ) ಫಿಲಿಪ್ಸ್ ಕರ್ವ್

31) "ಕರೆನ್ಸಿ & ಹಣಕಾಸು ವರದಿ"ಯನ್ನು ವಾರ್ಷಿಕವಾಗಿ ಯಾರು ಪ್ರಕಟಿಸುತ್ತಾರೆ?
ಎ) ಕೇಂದ್ರೀಯ ಅಂಕಿ–ಅಂಶಗಳ ಸಂಸ್ಥೆ(ಸಿಎಸ್‌ಒ)
ಬಿ) ಹಣಕಾಸು ಸಚಿವಾಲಯ
ಸಿ) ಆರ್ಥಿಕ ವ್ಯವಹಾರಗಳ ಇಲಾಖೆ
ಡಿ) ಆರ್‌ಬಿಐ

32) ಪ್ರಸ್ತುತ ಜಿಡಿಪಿಯ ಮೂಲ ವರ್ಷವಾಗಿ ಯಾವ ವರ್ಷವನ್ನು ಬಳಸಲಾಗುತ್ತಿದೆ?
ಎ) 2004–05 ಬಿ) 2010–11
ಸಿ) 2011–12 ಡಿ) 2015–16

33) ಜೀವಕೋಶದಾದ್ಯಂತ ವಿತರಿಸಲಾಗುವ ಅಣುಗಳಿಗೆ ಪ್ರಾಥಮಿಕ ಪ್ಯಾಕೇಜಿಂಗ್ ಪ್ರದೇಶವಾಗಿ ಕಾರ್ಯನಿರ್ವಹಿಸುವ ಅಂಗಾಂಗ?
ಎ) ಮೈಟೋಕಾಂಡ್ರಿಯಾ
ಬಿ) ಪ್ಲಾಸ್ಟಿಡ್‌ಗಳು ಸಿ) ಗಾಲ್ಗಿ ಸಂಕೀರ್ಣ
ಡಿ) ವ್ಯಾಕ್ಯುಯೋಲ್ಸ್

ಚಿಗುರು ಸ್ಪರ್ಧಾತ್ಮಕ ತರಬೇತಿ ಸಂಸ್ಥೆ
JD Square, 1ನೇ ಮಹಡಿ ಸ್ಪಂದನಾ ಆಸ್ಪತ್ರೆ ಹತ್ತಿರ
ಸಪ್ತಾಪುರ ಭಾವಿ, ಧಾರವಾಡ-580001
ಮೊ: 7022471511, 7022473611



Scanned with CamScanner

www.shikarat.com



34) ಲ್ಯುಕೇಮಿಯಾ ಒಂದು ರೀತಿಯ ಕ್ಯಾನ್ಸರ್ ಆಗಿದ್ದು, ಇದಕ್ಕೆ ಕಾರಣ......?
ಎ) ದೇಹದಲ್ಲಿ ಬಿಳಿರಕ್ತ ಕಣಗಳ ಹೆಚ್ಚಾಗುವಿಕೆ
ಬಿ) ದೇಹದಲ್ಲಿ ಬಿಳಿರಕ್ತ ಕಣಗಳ ಕಡಿಮೆಯಾಗುವಿಕೆ
ಸಿ) ದೇಹದಲ್ಲಿ ಕೆಂಪುರಕ್ತ ಕಣಗಳ ಕಡಿಮೆಯಾಗುವಿಕೆ
ಡಿ) ದೇಹದಲ್ಲಿ ಕೆಂಪುರಕ್ತ ಕಣಗಳ ಹೆಚ್ಚಾಗುವಿಕೆ

35) ಭೂಮಿಯ ಸುತ್ತ ಒಂದು ನಿರ್ದಿಷ್ಟ ಕಕ್ಷೆಗೆ ಉಪಗ್ರಹವನ್ನು ಹಾಕಲು ಅಗತ್ಯವಿರುವ ಕನಿಷ್ಟ ವೇಗವನ್ನು ಏನೆಂದು ಕರೆಯಲಾಗುವುದು?
ಎ) ಚಲನಾ ವೇಗ ಬಿ) ಕಕ್ಷಾ ವೇಗ
ಸಿ) ವಿಮೋಚನಾ ವೇಗ ಡಿ) ನಿರ್ದಿಷ್ಟ ವೇಗ

36) ಅಯೋಡೆಕ್ಸ್, ನೋವು ನಿವಾರಕ ಕ್ರೀಮ್‌ಗಳು ಕೆಳಗಿನ ಯಾವ ರಾಸಾಯನಿಕದ ವಾಸನೆ ಹೊಂದಿರುತ್ತದೆ?
ಎ) ಮೀಥೈಲ್ ಸ್ಯಾಲಿಸಿಲೇಟ್
ಬಿ) ಈಥೈಲ್ ಸ್ಯಾಲಿಸಿಲೇಟ್
ಸಿ) ಪ್ರೊಪೈಲ್ ಸ್ಯಾಲಿಸಿಲೇಟ್
ಡಿ) ಬ್ಯುಟೇಲ್ ಸ್ಯಾಲಿಸಿಲೇಟ್

CHIGURU COMPETITIVE COACHING INSTITUTE CHIGURU DHARWAD

37) ಗ್ರಾಹಕ ಬೆಲೆ ಸೂಚ್ಯಂಕ (ನಗರ)ದಲ್ಲಿ ಅತಿ ಹೆಚ್ಚು ಮೌಲ್ಯ ಹೊಂದಿರುವ ಸರಕು?
ಎ) ಇಂಧನ & ವಿದ್ಯುತ್
ಬಿ) ಆಹಾರ & ಪಾನೀಯ ಪದಾರ್ಥಗಳು
ಸಿ) ಗೃಹ ಬಳಕೆ ಡಿ) ಜವಳಿ & ಪಾದರಕ್ಷೆಗಳು

38) ಕೆಳಗಿನ ಹೇಳಿಕೆ ಗಮನಿಸಿ, ಸಂಕೇತಗಳ ಸಹಾಯದಿಂದ ಉತ್ತರಿಸಿ.
1. ಗಾಜು ರಬ್ಬರ್‌ಗಿಂತ ಹೆಚ್ಚು ಸ್ಥಿತಿಸ್ಥಾಪಕತ್ವ (Elasticity) ಗುಣ ಹೊಂದಿದೆ.
2. ತಾಮ್ರವು ಉಕ್ಕಿಗಿಂತ ಹೆಚ್ಚು ಸ್ಥಿತಿಸ್ಥಾಪಕತ್ವ (Elasticity) ಗುಣ ಹೊಂದಿದೆ.

ಸಂಕೇತಗಳು :
ಎ) 1 & 2 ಸರಿ ಬಿ) 1 & 2 ತಪ್ಪು
ಸಿ) 1 ಸರಿ, 2 ತಪ್ಪು ಡಿ) 1 ತಪ್ಪು, 2 ಸರಿ

39) ಸಿಎಜಿ ಯ ಕುರಿತು ಯಾವ ಹೇಳಿಕೆಗಳು ಸರಿಯಾಗಿವೆ?
1. ಅಧಿಕಾರಾವಧಿ 6 ವರ್ಷ / 65 ವರ್ಷದವರೆಗೆ
2. ಕೇಂದ್ರ & ರಾಜ್ಯ ಎರಡೂ ಹಂತಗಳ ಹಣಕಾಸು ಖಾತೆಗಳನ್ನು ಲೆಕ್ಕ ಪರಿಶೋಧಿಸುತ್ತಾರೆ
3. ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರನ್ನು ತೆಗೆದು ಹಾಕುವ ಮಾದರಿಯಲ್ಲಿಯೇ ರಾಷ್ಟ್ರಪತಿಗಳು ಇವರನ್ನು ತೆಗೆದು ಹಾಕಬಹುದು

ಆಯ್ಕೆಗಳು :
ಎ) 1 & 3 ಮಾತ್ರ ಬಿ) 2 ಮಾತ್ರ
ಸಿ) 2 & 3 ಮಾತ್ರ ಡಿ) 1, 2 & 3

40) ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ & ನಡೆಸುವ ಅಲ್ಪಸಂಖ್ಯಾತರ ಹಕ್ಕಿಗೆ ಸಂವಿಧಾನದ ಯಾವ ವಿಧಿಯು ಖಾತರಿ ನೀಡುತ್ತದೆ?
ಎ) 29ನೇ ವಿಧಿ ಬಿ) 30ನೇ ವಿಧಿ
ಸಿ) 28ನೇ ವಿಧಿ ಡಿ) 25ನೇ ವಿಧಿ

41) ಭಾರತ ಸಂವಿಧಾನದ ರಚನೆಯ ಸಂದರ್ಭದಲ್ಲಿ ರಚಿಸಲಾಗಿದ್ದ ಮೂಲಭೂತ ಹಕ್ಕುಗಳ ಸಲಹಾ ಸಮಿತಿಯ ಅಧ್ಯಕ್ಷರಾಗಿದ್ದವರು ಯಾರು?
ಎ) ಬಾಬು ರಾಜೇಂದ್ರ ಪ್ರಸಾದ್
ಬಿ) ಸರ್ದಾರ್ ವಲ್ಲಭಬಾಯ್ ಪಟೇಲ್
ಸಿ) ಜೆ.ಬಿ. ಕೃಪಲಾನಿ ಡಿ) ಹೆಚ್.ಸಿ.ಮುಖರ್ಜಿ

42) ಭಾರತೀಯ ಸಂವಿಧಾನದಲ್ಲಿ ಸುಗ್ರೀವಾಜ್ಞೆಯನ್ನು ಇಲ್ಲಿಂದ ಎರವಲು ಪಡೆಯಲಾಗಿದೆ?
ಎ) 1858ರ ಭಾರತ ಸರ್ಕಾರ ಕಾಯ್ದೆ
ಬಿ) 1919ರ ಮಾಂಟೆಗೋ –ಚೆಮ್ಸ್ ಫರ್ಡ್ ಸುಧಾರಣೆಗಳು
ಸಿ) 1935ರ ಭಾರತ ಸರ್ಕಾರ ಕಾಯ್ದೆ
ಡಿ) ಭಾರತ ಸ್ವಾತಂತ್ರ್ಯ ಕಾಯ್ದೆ, 1947

43) "ಮಾರ್ಕ್ವಿಸ್ ಆಫ್ ಕ್ವೀನ್ಸ್‌ಬೆರಿ ನಿಯಮಗಳು" ಈ ಕೆಳಗಿನ ಕ್ರೀಡೆಗಳಲ್ಲಿ ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟ ನಿಯಮಗಳ ಸಂಕೇತವಾಗಿದೆ?
ಎ) ಚೆಸ್ ಬಿ) ಬಾಕ್ಸಿಂಗ್
ಸಿ) ಹಾಕಿ ಡಿ) ಟೆನಿಸ್

44) ಕೆಳಗಿನವುಗಳಲ್ಲಿ ಯಾವ ಕೇಂದ್ರಾಡಳಿತ ಪ್ರದೇಶಗಳು ರಾಜ್ಯಸಭೆಯಲ್ಲಿ ಪ್ರಾತಿನಿಧ್ಯತೆ ಹೊಂದಿವೆ?
1. ದೆಹಲಿ 2. ಪುದುಚೆರಿ
3. ಚಂಡೀಗಢ 4. ಜಮ್ಮು & ಕಾಶ್ಮೀರ

ಸಂಕೇತಗಳು :
ಎ) 1 & 2 ಮಾತ್ರ ಬಿ) 1, 2 & 3 ಮಾತ್ರ
ಸಿ) 2, 3 & 4 ಮಾತ್ರ ಡಿ) 1, 2 & 4 ಮಾತ್ರ

45) ಕೆಳಗಿನವುಗಳಲ್ಲಿ ಯಾವುದು ವಿವರ್ತನೆಗೆ (Diffraction) ಉದಾಹರಣೆಯಾಗಿದೆ?
ಎ) ಆಕಾಶದ ನೀಲಿಬಣ್ಣ ಬಿ) ನಕ್ಷತ್ರಗಳ ಮಿನುಗುವಿಕೆ
ಸಿ) ಟಿಂಡಾಲ್ ಪರಿಣಾಮ
ಡಿ) CD ಯಲ್ಲಿ ಕಂಡುಬರುವ ಕಾಮನಬಿಲ್ಲು ಮಾದರಿ

46) ಆಲ್ಬರ್ಟ್ ಐನ್‌ಸ್ಟೀನ್‌ರ $E=MC^2$ ಎಂಬ ಸೂತ್ರದಲ್ಲಿ "C" ಯು ಏನನ್ನು ಸೂಚಿಸುತ್ತದೆ?
ಎ) ಶಕ್ತಿಯ ಘಟಕ ಬಿ) ವಿದ್ಯುತ್ಪ್ರವಾಹ
ಸಿ) ಕ್ಯಾಲೋರಿ ಡಿ) ಬೆಳಕಿನ ವೇಗ

ಚಿಗುರು ಸ್ಪರ್ಧಾತ್ಮಕ ತರಬೇತಿ ಸಂಸ್ಥೆ
ID Square, 1ನೇ ಮಹಡಿ ಸ್ಪಂದನಾ ಆಸ್ಪತ್ರೆ ಹತ್ತಿರ
ಸಪ್ತಾಪುರ ಬಾವಿ, ಧಾರವಾಡ-580001
ನಂ: 7022471511, 7022473611

Scanned with CamScanner

www.shikarat.com

# SHIKARAT.COM

Online Education

## For more contact us

**Website**

www.shikarat.com

Instagram

**Email**

Admin@shikarat.com

Telegram

SHIKARAT.COM

Online Education

Facebook

Sharing is Caring

Twitter

😍If it is helpful Please Share with your friends😍

Pinterest

9742928829

www.shikarat.com



47) ಚಲಿಸುತ್ತಿರುವ ಬಸ್ ಒಮ್ಮೆಲೆ ನಿಂತಾಗ ಪ್ರಯಾಣಿಕರು ಮುಗ್ಗರಿಸಲು ಕಾರಣ?
ಎ) ಪ್ರಯಾಣಿಕರು ಚಲನೆಯಲ್ಲಿ ಮುಂದುವರೆಯುವುದು
ಬಿ) ಬಸ್ ಚಲನೆಯಲ್ಲಿ ಮುಂದುವರೆಯುವುದು
ಸಿ) ಪ್ರಯಾಣಿಕರು & ಬಸ್ ನಡುವೆ ಘರ್ಷಣೆ ಉಂಟಾಗುವುದು
ಡಿ) ಮೇಲಿನ ಯಾವುದು ಅಲ್ಲ

48) ಕೆಳಗಿನವುಗಳಲ್ಲಿ ಸರಿಯಾದ ಹೇಳಿಕೆ ಗುರ್ತಿಸಿ.
1. ವ್ಯಕ್ತಿಯೊಬ್ಬನು ನೀರಿನಲ್ಲಿ ಮುಳುಗಿರುವ ನಾಣ್ಯವನ್ನು ನೋಡಿದಾಗ ಅದು ನಿಜವಾದ ಆಳಕ್ಕಿಂತ ಮೇಲೆ ಕಾಣಿಸಿಕೊಳ್ಳುವುದು
2. ನೀರಿನಲ್ಲಿ ಮುಳುಗಿರುವ ವ್ಯಕ್ತಿಗೆ ನೀರಿನ ಮೇಲೆ ಇರುವ ನಾಣ್ಯವು ಅವನಿಂದಿರುವ ದೂರಕ್ಕಿಂತ ಹೆಚ್ಚು ದೂರದಲ್ಲಿ ಕಾಣಿಸಿಕೊಳ್ಳುವುದು
ಆಯ್ಕೆಗಳು :
ಎ) 1 ಸರಿ, 2 ತಪ್ಪು ಬಿ) 1 ತಪ್ಪು, 2 ಸರಿ
ಸಿ) 1 & 2 ಸರಿ ಡಿ) 1 & 2 ತಪ್ಪು

49) ಈ ಕೆಳಗಿನವುಗಳಲ್ಲಿ "ಮೀರ್ಬೇನ್ ಎಣ್ಣೆ" ಯ ಅತ್ಯಂತ ಸಾಮಾನ್ಯ ಹೆಸರು?
ಎ) ಫಿನಾಯಿಲ್ ಬಿ) ಟೊಲುಯಿನ್
ಸಿ) ಫಿನಾಲ್ಫ್ ಲೀನ್ ಡಿ) ನೈಟ್ರೋ ಬೆಂಜಿನ್

50) ಭಾರತದ ಪಶ್ಚಿಮ ಕರಾವಳಿಗೆ ಸಂಬಂಧಿಸಿದಂತೆ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ?
1. ಕಿರಿದಾದ ತೀರ ಪ್ರದೇಶ ಹೊಂದಿದೆ
2. ಡೆಲ್ಟಾಗಳನ್ನು ನಿರ್ಮಿಸಿದೆ
3. ಬಂದರು ನಿರ್ಮಾಣಕ್ಕೆ ನೈಸರ್ಗಿಕ ಸ್ಥಿತಿಗಳನ್ನು ಒದಗಿಸುತ್ತದೆ
4. ಇದು ಮುಳುಗಿರುವ ಕರಾವಳಿ ಮೈದಾನಕ್ಕೆ ಉದಾಹರಣೆಯಾಗಿದೆ
ಆಯ್ಕೆಗಳು :
ಎ) 1, 2 & 3 ಬಿ) 2, 3 & 4
ಸಿ) 1, 3 & 4 ಡಿ) 1 & 3 ಮಾತ್ರ

51) ಮಳೆನೆರಳಿನ ಪರಿಣಾಮವು ಯಾವುದಕ್ಕೆ ಸಂಬಂಧಿಸಿದೆ?
ಎ) ಸೈಕ್ಲೋನಿಕ್ ಮಳೆ ಬಿ) ಒರೋಗ್ರಾಫಿಕ್ ಮಳೆ
ಸಿ) ಸಂವಹನ ಮಳೆ ಡಿ) ಫ್ರಂಟಲ್ ಮಳೆ

52) "ಪ್ರತಿ ದಿನವೂ ಹೆಚ್ಚು-ಕಡಿಮೆ ಒಂದೇ ರೀತಿಯಾಗಿದ್ದು, ಮುಂಜಾನೆಯು ಶುಭ್ರವಾಗಿ ಸಮುದ್ರದ ತಂಗಾಳಿಯೊಂದಿಗೆ ಪ್ರಕಾಶಮಾನವಾಗಿರುತ್ತದೆ, ಸೂರ್ಯನು ಆಕಾಶದಲ್ಲಿ ಮೇಲೇರಿದಂತೆ ಶಾಖ ಹೆಚ್ಚಾಗಿ, ಕಪ್ಪು ಮೋಡಗಳು ರೂಪಿಸಲ್ಪಟ್ಟು ಗುಡುಗು & ಮಿಂಚಿನ ಮಳೆ ಬರುತ್ತದೆ ಆದರೆ ಕಡಿಮೆ/ಅತ್ಯಲ್ಪ ಸಮಯದಲ್ಲಿ ಮಳೆ ನಿಂತು ಹೋಗುತ್ತದೆ" ಮೇಲಿನ ವಾಕ್ಯ ವೃಂದದಲ್ಲಿ ಕೆಳಗಿನ ಯಾವ ಪ್ರದೇಶಗಳನ್ನು ವಿವರಿಸಲಾಗಿದೆ?
ಎ) ಸವನ್ನಾ ಬಿ) ಮಾನ್ಸೂನ್
ಸಿ) ಸಮಭಾಜಕ ಡಿ) ಮೆಡಿಟರೇಯಿನ್

53) ಅಕ್ಟೋಬರ್ & ನವೆಂಬರ್ ತಿಂಗಳಲ್ಲಿ ........ ಭಾರೀ ಮಳೆಯಾಗುತ್ತದೆ?
ಎ) ಗ್ಯಾರೋ, ಖಾಸಿ & ಜೈಂತಿಯಾ ಬೆಟ್ಟಗಳಲ್ಲಿ
ಬಿ) ಛೋಟಾ ನಾಗ್ಪುರ ಪ್ರಸ್ಥಭೂಮಿ
ಸಿ) ಕೋರಮಂಡಲ ಕರಾವಳಿ
ಡಿ) ಮಾಳ್ವಾ ಪ್ರಸ್ಥಭೂಮಿ

54) ವಿಮಾನಗಳಲ್ಲಿ ಕಂಡು ಬರುವ "ಬ್ಲ್ಯಾಕ್ ಬಾಕ್ಸ್" ನ ನಿಜವಾದ ಬಣ್ಣ ಯಾವುದು?
ಎ) ಬಿಳಿ ಬಿ) ಹಸಿರು
ಸಿ) ಕಿತ್ತಳೆ ಡಿ) ಕಪ್ಪು

55) ವಾತಾವರಣದ ತಾಪದ ಬದಲಾವಣೆಗೆ ಅನುಗುಣವಾಗಿ ತಮ್ಮ ದೇಹದ ತಾಪವನ್ನು ಬದಲಾಯಿಸಿಕೊಳ್ಳುವ ಶೀತರಕ್ತ ಪ್ರಾಣಿಗಳ ವರ್ಗವನ್ನು ಏನೆಂದು ಕರೆಯುತ್ತಾರೆ?
ಎ) ಸಸ್ತನಿಗಳು (Mammals)
ಬಿ) ಪೈಸಿಸ್ (Pisces)
ಸಿ) ಹಕ್ಕಿಗಳು (Aves) ಡಿ) ಯಾವುದು ಅಲ್ಲ

56) ಕೆಳಕಂಡ ಯಾವ ಜೋಡಿ ತಪ್ಪಾಗಿದೆ?
ಎ) ಸಿ.ಕೆ.ನಾಯ್ಡು ಟ್ರೋಫಿ – ಕ್ರಿಕೆಟ್
ಬಿ) ಡ್ಯುರಾಂಡ್ ಕಪ್ – ಫುಟ್‌ಬಾಲ್
ಸಿ) ಧ್ಯಾನ್ ಚಂದ್ ಕಪ್ – ಹಾಕಿ
ಡಿ) ಆಘಾಖಾನ್ ಕಪ್ – ವಾಲಿಬಾಲ್

57) ಬದನೆಯ ಅನುವಂಶಿಕ ತಳಿಯಾದ ಬಿಟಿ-ಬದನೆಯನ್ನು ಈ ಉದ್ದೇಶದಿಂದ ಅಭಿವೃದ್ಧಿ ಪಡಿಸಿದೆ?
ಎ) ಕೀಟ ನಿರೋಧಕ ಮಾಡಲು
ಬಿ) ರುಚಿ & ಪೌಷ್ಟಿಕಾಂಶಗಳ ಗುಣಗಳನ್ನು ಸುಧಾರಿಸಲು
ಸಿ) ಬರ ನಿರೋಧಕ ಮಾಡಲು
ಡಿ) ಜೀವಿತಾವಧಿಯನ್ನು ಹೆಚ್ಚಿಸಲು

58) ವಿಶ್ವ ಪ್ರಸಿದ್ಧ 'ಧುವಾಂಧರ್' ಅಥವಾ 'ಮಂಜಿನ ಮೋಡ ಜಲಪಾತ' ವು ಕೆಳಗಿನ ಯಾವ ನದಿಯ ಸಮೀಪವಿದೆ?
ಎ) ನರ್ಮದಾ ಬಿ) ತಪತಿ
ಸಿ) ದಾಮೋದರ್ ಡಿ) ಬ್ರಹ್ಮಿಣಿ

59) ಸಮುದ್ರದಲ್ಲಿ ಈಜುವುದು ನದಿಯಲ್ಲಿ ಈಜುವುದಕ್ಕಿಂತ ಸುಲಭ ಏಕೆಂದರೆ?
ಎ) ಸಮುದ್ರದ ನೀರಿನ ಸಾಂದ್ರತೆ ಹೆಚ್ಚು
ಬಿ) ನದಿ ನೀರಿನ ಸಾಂದ್ರತೆ ಹೆಚ್ಚು
ಸಿ) ಸಮುದ್ರದ ನೀರು ಸದಾ ಚಲನೆಯಲ್ಲಿರುತ್ತದೆ
ಡಿ) ನದಿಯ ನೀರು ಬಿಸಿಯಾಗಿರುತ್ತದೆ

CHIGURU COMPETITIVE COACHING INSTITUTE CHIGURU DHARWAD



Scanned with CamScanner

www.shikarat.com



60) AFSPA ಕಾಯ್ದೆಯ ಕುರಿತ ಕೆಳಗಿನ ಹೇಳಿಕೆ ಗಮನಿಸಿ

1. ಕ್ವಿಟ್ ಇಂಡಿಯಾ ಚಳುವಳಿಗೆ ಪ್ರತಿಯಾಗಿ ಬ್ರಿಟಿಷ್ ಸರ್ಕಾರದಿಂದ 1942 ರಲ್ಲಿ ಜಾರಿಗೆ ಬಂದಿತು.
2. ಈ ಕಾಯ್ದೆಯನ್ನು ಕೇಂದ್ರ ಸರ್ಕಾರ ಮಾತ್ರ ಜಾರಿಗೊಳಿಸಬಹುದು.
3. ಸೇನೆಗೆ ಇದು ವ್ಯಕ್ತಿಗಳನ್ನು ಅನುಮಾನದ ಆಧಾರದ ಮೇಲೆ ವಾರೆಂಟ್‌ಗಳಿಲ್ಲದೆ ಬಂಧಿಸುವ, ಗುಂಡು ಹಾರಿಸುವ ಅಧಿಕಾರ ನೀಡುತ್ತದೆ.
4. ಕೇಂದ್ರದ ಅನುಮತಿಯಿಲ್ಲದೆ ಇಲ್ಲಿ ಕಾರ್ಯನಿರ್ವಹಿಸುವ ಸೇನಾ ಸಿಬ್ಬಂಧಿಯ ಮೇಲೆ ಯಾವುದೇ ರೀತಿಯ ಶಿಕ್ಷೆ ಅಥವಾ ಕಾನೂನು ಪ್ರಕ್ರಿಯೆಗೆ ಅವಕಾಶವಿಲ್ಲ.

ಮೇಲಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆಗಳು ಯಾವುವು?

ಎ) 1, 2 & 3 ಬಿ) 2, 3 & 4
ಸಿ) 1, 3 & 4 ಡಿ) 1, 2, 3 & 4

61) ಆಪರೇಷನ್ AATH ಯಾವುದಕ್ಕೆ ಸಂಬಂಧಿಸಿದೆ?

ಎ) ಮಾನವ ಕಳ್ಳ ಸಾಗಾಣಿಕೆ
ಬಿ) ಕೌಟುಂಬಿಕ ಅತ್ಯಾಚಾರ
ಸಿ) ವ್ಯಾಕ್ಸಿನ್ ಸುಧಾರಿಸುವಿಕೆ
ಡಿ) ಯಾವುದು ಅಲ್ಲ

CHIGURU COMPETITIVE COACHING INSTITUTE CHIGURU DHARWAD

62) ತೆರೆದ ಮಾರುಕಟ್ಟೆ ಆಪರೇಷನ್‌ಗಳ ಕುರಿತು ಕೆಳಗಿನ ಹೇಳಿಕೆ ಗಮನಿಸಿ.

1. ಆರ್‌ಬಿಐ ನ ಮಾರುಕಟ್ಟೆ ನೀತಿಯಾಗಿದೆ.
2. ಸರ್ಕಾರಿ ಭದ್ರತೆಗಳ ಮಾರುವ ಹಾಗೂ ಕೊಳ್ಳುವಿಕೆಯ ಪ್ರಕ್ರಿಯೆಯಾಗಿದೆ.
3. ಮಾರುಕಟ್ಟೆಯಲ್ಲಿ ಹಣದ ಪ್ರಮಾಣ ಜಾಸ್ತಿ ಇದ್ದಾಗ ಆರ್‌ಬಿಐ ಸರ್ಕಾರಿ ಭದ್ರತೆಗಳನ್ನು ಮಾರುತ್ತದೆ.

ಸರಿಯಾದ ಹೇಳಿಕೆಗಳು ಯಾವುವು?

ಎ) 1 & 2 ಬಿ) 1 ಮಾತ್ರ
ಸಿ) 1, 2 & 3 ಡಿ) 2 & 3

63) ಹವಳದ ದಿಬ್ಬಗಳ ಕುರಿತು ತಪ್ಪಾದ ಹೇಳಿಕೆ ಗುರ್ತಿಸಿ.

ಎ) ಇವು ಹೆಚ್ಚಾಗಿ ಉಷ್ಣವಲಯದ ನೀರಿನಲ್ಲಿ ಕಂಡು ಬರುತ್ತವೆ
ಬಿ) ಜಗತ್ತಿನ ಶೇಕಡಾ 1/3 ರಷ್ಟು ಹವಳದ ದಿಬ್ಬಗಳು ಆಸ್ಟ್ರೇಲಿಯಾ, ಇಂಡೋನೇಷ್ಯಾ, ಫಿಲಿಫೈನ್ಸ್‌ನಲ್ಲಿವೆ.
ಸಿ) ಇವು ಉಷ್ಣವಲಯದ ಮಳೆಕಾಡಿಗಿಂತ ಹೆಚ್ಚಿನ ಪ್ರಾಣಿ ಪ್ರಬೇಧಗಳನ್ನು ಹೊಂದಿದೆ
ಡಿ) ಮೇಲಿನ ಎಲ್ಲವೂ ಸರಿಯಾಗಿದೆ

64) ಹರ್ಷವರ್ಧನನು ಥಾನೇಶ್ವರದಿಂದ ರಾಜಧಾನಿಯನ್ನು ಎಲ್ಲಿಗೆ ವರ್ಗಾಯಿಸಿದನು?

ಎ) ಉಜ್ಜಯಿನಿ ಬಿ) ಮಥುರಾ
ಸಿ) ಪೇಷಾವರ್ ಡಿ) ಕನೋಜ್

65) ಈ ಕೆಳಗಿನವರಲ್ಲಿ ಯಾರು ದೆಹಲಿಯಲ್ಲಿ 'ಸಿರಿ' ಎಂಬ ಪಟ್ಟಣವನ್ನು ಕಟ್ಟಿಸಿದನು & ಅಲೈ ದರ್ವಾಜಾ ಇವನ ಭವ್ಯ ರಚನೆಯಾಗಿದೆ?

ಎ) ಮಲ್ಲಿಕಾಫರ್ ಬಿ) ಅಲ್ಲಾವುದ್ದೀನ್ ಖಿಲ್ಜಿ
ಸಿ) ಕುತುಬುದ್ದೀನ್ ಡಿ) ಅಕ್ಬರ್

66) ಕೆಳಗಿನವರಲ್ಲಿ ಯಾವ ದೆಹಲಿ ಸುಲ್ತಾನರ ಕಾಲಾವಧಿಯಲ್ಲಿ 'ದಿವಾನ್-ಇ-ಅಮಿರ್‌ಕೋಹಿ' ಯನ್ನು ಸ್ಥಾಪಿಸಲಾಯಿತು?

ಎ) ಅಲ್ಲಾವುದ್ದೀನ್ ಖಿಲ್ಜಿ
ಬಿ) ಫಿರೋಜ್-ಷಾ-ತುಘಲಕ್
ಸಿ) ಮಹಮ್ಮದ್-ಬಿನ್-ತುಘಲಕ್
ಡಿ) ಇಲ್ತುಮಷ್

67) ಭಾರತದಲ್ಲಿ ಮೊದಲಿಗೆ ಮಾನವ ಮೂರ್ತಿ ಪೂಜಿಸಿದ್ದು?

ಎ) ಬ್ರಹ್ಮ ಬಿ) ವಿಷ್ಣು
ಸಿ) ಶಿವ ಡಿ) ಬುದ್ಧ

68) ಪತ್ರಗಳ ಮೂಲಕ ನೆಪೋಲಿಯನ್ ಬೋನ್‌ಪಾರ್ಟೆಯೊಂದಿಗೆ ಕರ್ನಾಟಕದಿಂದ ಯಾವ ಅರಸ ಸಂಪರ್ಕವನ್ನಿರಿಸಿಕೊಂಡಿದ್ದ?

ಎ) ಅಲಿ ಅದಿಲ್ ಷಾ
ಬಿ) ಮಹಮ್ಮದ್ ಆದಿಲ್ ಷಾ
ಸಿ) ಹೈದರ್ ಅಲಿ ಡಿ) ಟಿಪ್ಪು ಸುಲ್ತಾನ್

69) ಬಾಂಬೆ ಶಾಸನ ಸಭೆಗೆ ರಾಜೀನಾಮೆ ನೀಡಿ, ಕನ್ನಡ ಮಾತನಾಡುವ ಪ್ರದೇಶಗಳ ಏಕೀಕರಣವನ್ನು ಒತ್ತಾಯಿಸಿ ಆಮರಣಾಂತ ಉಪವಾಸ ಆರಂಭಿಸಿದವರಾರು?

ಎ) ಎಸ್. ನಿಜಲಿಂಗಪ್ಪ ಬಿ) ಆಲೂರು ವೆಂಕಟರಾಯರು
ಸಿ) ಅಂದಾನಪ್ಪ ದೊಡ್ಡಮೇಟಿ
ಡಿ) ಡಿ. ದೇವರಾಜ್ ಅರಸು

70) ಕೆಳಗಿನ ಹೇಳಿಕೆಗಳನ್ನು ಗಮನಿಸಿ.

1. ಖಾಸಗಿ ಮಸೂದೆಯು ಸಚಿವ/ಮಂತ್ರಿಗಳಲ್ಲದೆ ಸದನದ ಸದಸ್ಯನಿಂದ ಪರಿಚಯಿಸಲ್ಪಡುತ್ತದೆ.
2. ಈ ಮಸೂದೆಯ ಮಂಡನೆಗೆ ಒಂದು ತಿಂಗಳ ಪೂರ್ವದಲ್ಲೇ ಅನುಮತಿ ಪಡೆದಿರಬೇಕು.
3. ಇದು ಸಂಸತ್ತಿನಲ್ಲಿ ಮಂಡನೆಯಾಗಿ ಒಪ್ಪಿಕೊಳ್ಳುವ ಅವಕಾಶ ಹೆಚ್ಚಾಗಿರುತ್ತದೆ.

ಸರಿಯಾದ ಹೇಳಿಕೆಗಳನ್ನು ಗುರ್ತಿಸಿ.

ಎ) 1 & 2 ಮಾತ್ರ ಬಿ) 2 & 3 ಮಾತ್ರ
ಸಿ) 1 & 3 ಮಾತ್ರ ಡಿ) ಮೇಲಿನ ಎಲ್ಲವೂ

71) ರಾಜ್ಯ ಸಭಾ ಸೀಟು ಹಂಚಿಕೆಯ ಕುರಿತು ಯಾವ ಅನುಸೂಚಿ ತಿಳಿಸುತ್ತದೆ?

ಎ) 3ನೇ ಅನುಸೂಚಿ ಬಿ) 4ನೇ ಅನುಸೂಚಿ
ಸಿ) 2ನೇ ಅನುಸೂಚಿ ಡಿ) 5ನೇ ಅನುಸೂಚಿ



Scanned with CamScanner

72) ಕೆಳಗಿನ ಯಾವ ತಿದ್ದುಪಡಿ ಕಾಯ್ದೆ ಮೂಲಕ ಕೇಂದ್ರಾಡಳಿತ ಪ್ರದೇಶಗಳ ಪರಿಕಲ್ಪನೆಯನ್ನು ಭಾರತೀಯ ಸಂವಿಧಾನಕ್ಕೆ ಪರಿಚಯಿಸಲಾಯಿತು?

ಎ) 4ನೇ ತಿದ್ದುಪಡಿ ಕಾಯ್ದೆ, 1955
ಬಿ) 7ನೇ ತಿದ್ದುಪಡಿ ಕಾಯ್ದೆ, 1956
ಸಿ) 8ನೇ ತಿದ್ದುಪಡಿ ಕಾಯ್ದೆ, 1959
ಡಿ) 11ನೇ ತಿದ್ದುಪಡಿ ಕಾಯ್ದೆ,1961

73) ಕೆಳಗಿನ ಹೇಳಿಕೆಗಳನ್ನು ಗಮನಿಸಿ.

1. ಭಾರತ ಸಂವಿಧಾನದ ತತ್ವ–ಆದರ್ಶಗಳನ್ನು ಪ್ರಸ್ತಾವಣೆಯಲ್ಲಿ ಕಾಣಬಹುದು.
2. ಪ್ರಸ್ತಾವಣೆಯಲ್ಲಿನ ತತ್ವಗಳನ್ನು ಮೂಲಭೂತ ಹಕ್ಕು & ರಾಜ್ಯ ನಿರ್ದೇಶಕ ತತ್ವಗಳಲ್ಲಿ ವಿವರವಾಗಿ ತಿಳಿಸಲಾಗಿದೆ.
3. ವಿಚಾರ, ಅಭಿಮತ,ನಂಬಿಕೆಯ ಸ್ವಾತಂತ್ರ್ಯವನ್ನು ಮೂಲಭೂತ ಹಕ್ಕುಗಳಲ್ಲಿ ನೀಡಲಾಗಿದೆ.

ಸರಿಯಾದ ಹೇಳಿಕೆಗಳು ಯಾವುವು?

ಎ) 1 ಮಾತ್ರ  ಬಿ) 2 ಮಾತ್ರ
ಸಿ) 1 & 3 ಮಾತ್ರ  ಡಿ) ಮೇಲಿನ ಎಲ್ಲವೂ ಸರಿ

74) ಹೊಂದಿಸಿ ಬರೆಯಿರಿ.

| 1 | 2 |
|---|---|
| P. ಕೆಂಕರ್ | 1. ಸಣ್ಣ ತೊರೆಗಳ ಕಣ್ಮರೆ |
| Q. ಖಾದರ್ | 2. ಸುಣ್ಣದ ನಿಕ್ಷೇಪಗಳ ಒಳಗೊಳ್ಳುವಿಕೆ |
| R. ಭಾದೇರ್ | 3. ಸಾಂದ್ರ ಬೇಸಾಯಕ್ಕೆ ಸೂಕ್ತವಾದುದು |
| S. ತೆರಾಯಿ | 4. ವನ್ಯಜೀವಿಗಳಿಂದ ತುಂಬಿರುವ ದಟ್ಟವಾದ ಅರಣ್ಯ ಪ್ರದೇಶ |

ಆಯ್ಕೆಗಳು:

| | P | Q | R | S |
|---|---|---|---|---|
| ಎ) | 1 | 3 | 4 | 2 |
| ಬಿ) | 2 | 4 | 3 | 1 |
| ಸಿ) | 2 | 3 | 1 | 4 |
| ಡಿ) | 3 | 2 | 1 | 4 |

75) ಹೊಂದಿಸಿ ಬರೆಯಿರಿ.

| 1 | 2 |
|---|---|
| P. 266ನೇ ವಿಧಿ | 1. ಸಾರ್ವಜನಿಕ ಖಾತೆ ನಿಧಿ |
| Q. 266 (2)ನೇ ವಿಧಿ | 2. ಕೇಂದ್ರ ಸಂಚಿತ ನಿಧಿ |
| R. 267(1)ನೇ ವಿಧಿ | 3. ಕೇಂದ್ರ ಸಾದಿಲ್ವಾರು ನಿಧಿ |

ಆಯ್ಕೆಗಳು:

| | P | Q | R |
|---|---|---|---|
| ಎ) | 1 | 2 | 3 |
| ಬಿ) | 2 | 1 | 3 |
| ಸಿ) | 1 | 3 | 2 |
| ಡಿ) | 2 | 3 | 1 |

76) ಮೊದಲ ಬಾರಿಗೆ ಮಹಿಳೆಯೊಬ್ಬರು ಹಂಗೇರಿ ದೇಶದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ, ಅವರು ಯಾರು?

ಎ) ಜೋ ಫೆರಿಲಿನಾ  ಬಿ) ನೋವಾ ಅಲಿಕತ್
ಸಿ) ಕಚಾಲಿನ್ ನೊವಾಕ್  ಡಿ) ಮೇಲಿನ ಯಾರು ಅಲ್ಲ

77) ಆ್ಯಸಿಡ್ ದಾಳಿ ಸಂತ್ರಸ್ತರಿಗೆ ನೀಡುತ್ತಿದ್ದ ಮಾಸಿಕ ಪಿಂಚಣಿ ಮೊತ್ತವನ್ನು 3000 ರಿಂದ ಎಷ್ಟಕ್ಕೆ ಹೆಚ್ಚಿಸಲಾಗಿದೆ?

ಎ) 5,000  ಬಿ) 7,000
ಸಿ) 8,000  ಡಿ) 10,000

78) ರಾಜ್ಯದ ಭಾಗ್ಯಜ್ಯೋತಿ, ಕುಟೀರ್ ಜ್ಯೋತಿ – ಯೋಜನೆಯಡಿ ಎಸ್‌ಸಿ – ಎಸ್‌ಟಿ ಕುಟುಂಬಗಳಿಗೆ ನೀಡುವ ಉಚಿತ ವಿದ್ಯುತ್ 40 ಯುನಿಟ್‌ನಿಂದ ಎಷ್ಟಕ್ಕೆ ಹೆಚ್ಚಿಸಲಾಗಿದೆ?

ಎ) 50  ಬಿ) 65
ಸಿ) 75  ಡಿ) 85

79) ಇತ್ತೀಚೆಗೆ "ಭಗವದ್ಗೀತೆ ಮ್ಯೂಸಿಯಂ" ಉದ್ಘಾಟನೆಗೊಂಡಿದ್ದು ಯಾವ ರಾಜ್ಯದಲ್ಲಿ?

ಎ) ಕರ್ನಾಟಕ  ಬಿ) ಉತ್ತರ ಪ್ರದೇಶ
ಸಿ) ಉತ್ತರ ಖಂಡ  ಡಿ) ಬಿಹಾರ

80) 2022–23ರ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರವು ಪ್ರತಿ ದಿನ ಎಷ್ಟು ಕಿ.ಮೀ.ರಾಷ್ಟ್ರೀಯ ಹೆದ್ದಾರಿ(NH) ನಿರ್ಮಾಣ ಗುರಿ ಹೊಂದಿದೆ?

ಎ) 37 ಕಿ.ಮೀ.  ಬಿ) 28.64 ಕಿ.ಮೀ.
ಸಿ) 42 ಕಿ.ಮೀ.  ಡಿ) 50 ಕಿ.ಮೀ.

81) ATP ಟೆನಿಸ್ ರ್‍ಯಾಂಕಿಂಗ್ – ಅಗ್ರಸ್ಥಾನದಲ್ಲಿರುವ ಆಟಗಾರ ಯಾರು?

ಎ) ಡ್ಯಾನಿಯಲ್ ಮೆಡ್ವೆಡೆವ್
ಬಿ) ನೊವಾಕ್ ಜೊಕೊವಿಕ್
ಸಿ) ರಫೆಲ್ ನಡಾಲ್  ಡಿ) ಅಲೆಕ್ಸಾಂಡರ್ ಜ್ವೆರೆವ್

82) ಯಾವ ವರ್ಷದೊಳಗಾಗಿ ಭಾರತದಲ್ಲಿ 6ಜಿ ಪ್ರಾರಂಭವಾಗಲಿದೆ ಎಂದು ಪಿಎಂ. ನರೇಂದ್ರ ಮೋದಿ ಅವರು ಪ್ರಕಟಿಸಿದ್ದಾರೆ?

ಎ) 2026  ಬಿ) 2028
ಸಿ) 2030  ಡಿ) 2032

83) ಇತ್ತೀಚೆಗೆ ಯಾವ ಎರಡು ರಾಷ್ಟ್ರಗಳು ನ್ಯಾಟೋ ಸದಸ್ಯತ್ವ ಪಡೆಯಲು ಅರ್ಜಿ ಸಲ್ಲಿಸಿವೆ?

ಎ) ಉಕ್ರೇನ್ & ಫಿನ್ಲೆಂಡ್  ಬಿ) ಉಕ್ರೇನ್ & ಸ್ವೀಡನ್
ಸಿ) ಫಿನ್ಲೆಂಡ್ & ನಾರ್ವೆ  ಡಿ) ಸ್ವೀಡನ್ & ಫಿನ್ಲೆಂಡ್

84) ಕರ್ನಾಟಕದಲ್ಲಿ ಜಾರಿಯಾಗಲಿರುವ ನೂತನ "ಯುವ ನೀತಿ ವರ್ಷ".....?

ಎ) 2022–25  ಬಿ) 2022–27
ಸಿ) 2022–30  ಡಿ) 2022–32

CHIGURU COMPETITIVE COACHING INSTITUTE
CHIGURU
★ DHARWAD ★
ಚಿಗುರು ... ತರಬೇತಿ ಸಂಸ್ಥೆ
ID Square, 1st ...
ಸಪ್ತಾಪುರ ಬಾವಿ, ಧಾರವಾಡ ...
ಮೊ: 70224/1611, ...



Scanned with CamScanner

www.shikarat.com



85) ಇತ್ತೀಚೆಗೆ ವಿಶ್ವದ ಅತಿ ಉದ್ದದ ತೂಗು ಸೇತುವೆ ಯಾವ ದೇಶದಲ್ಲಿ ಜನರ ಸಂಚಾರಕ್ಕೆ ಮುಕ್ತವಾಯಿತು?
ಎ) ಫಿಲಿಪೈನ್ಸ್ ಬಿ) ಜೆಕ್ ಗಣರಾಜ್ಯ
ಸಿ) ಭಾರತ ಡಿ) ಪಾಕಿಸ್ತಾನ

86) 2022ರ ಟೆಂಪಲ್ಟನ್ ಪ್ರಶಸ್ತಿ ಪುರಸ್ಕೃತರು ಯಾರು?
ಎ) ರೋಜರ್ ಪೆನ್ರೋಸ್ ಬಿ) ಜೇಮ್ಸ್ ಪೀಬಲ್ಸ್
ಸಿ) ಆರ್ಥರ್ ಆಶ್ಕಿನ್ ಡಿ) ಫ್ರಾಂಕ್ ವಿಲ್ಜೆಕ್

87) ಇತ್ತೀಚೆಗೆ ಸುದ್ಧಿಯಲ್ಲಿರುವ 'ಟೊಮೋಟೊ ಜ್ವರ' ಯಾವ ರಾಜ್ಯಕ್ಕೆ ಸ್ಥಳೀಯ ರೋಗವಾಗಿದೆ?
ಎ) ತಮಿಳುನಾಡು ಬಿ) ಕೇರಳ
ಸಿ) ಕರ್ನಾಟಕ ಡಿ) ಒಡಿಶಾ

88) ಭಾರತ ಮೊದಲ "ಅಮೃತ ಸರೋವರ" ಯಾವ ರಾಜ್ಯದಲ್ಲಿ ಉದ್ಘಾಟಿಸಲಾಗಿದೆ?
ಎ) ಗೋವಾ ಬಿ) ಜಮ್ಮು & ಕಾಶ್ಮೀರ
ಸಿ) ಉತ್ತರ ಪ್ರದೇಶ ಡಿ) ಗುಜರಾತ್

89) ಒಂದು ಶಾಲೆಯಲ್ಲಿ 12 ವಿದ್ಯಾರ್ಥಿಗಳಿದ್ದು, ಅವರಲ್ಲಿ 8 ಹುಡುಗರು & 4 ಹುಡುಗಿಯರಿದ್ದಾರೆ. 6 ಜನರ ಸಮಿತಿಯಲ್ಲಿ 4 ಹುಡುಗರು & 2 ಹುಡುಗಿಯರನ್ನು ಒಳಗೊಂಡಂತೆ ಎಷ್ಟು ವಿಧದಲ್ಲಿ ಆಯ್ಕೆ ಮಾಡಿಕೊಳ್ಳಬಹುದು?
ಎ) 400 ಬಿ) 450
ಸಿ) 500 ಡಿ) 420

90) A:B =3 : 4 & B:C=6 : 5 ಆದರೆ A:(A+C) ನ ಅನುಪಾತವೇನು?
ಎ) 9:11 ಬಿ) 9:10
ಸಿ) 9:19 ಡಿ) 6:7

91) ಎ, ಬಿ, ಸಿ ಗೆ 2600 ರೂ. ಗಳನ್ನು 1/2, 1/3, 1/4 ರ ಅನುಪಾತದಲ್ಲಿ ಹಂಚಿದಾಗ ಎ ನ ಪಾಲಿನ ಹಣವೆಷ್ಟು?
ಎ) 600 ರೂ. ಬಿ) 800 ರೂ.
ಸಿ) 1000 ರೂ. ಡಿ) 1200 ರೂ.

92) ಒಂದು ಕುಟುಂಬದ 6 ಜನರ ಸಂಬಳದ ಸರಾಸರಿಯು 6000 ರೂ. ಗಳಾಗಿರುತ್ತವೆ. ಆ ಕುಟುಂಬದ ಒಬ್ಬನ ಸಂಬಳವು 9000 ರೂ. ಹೆಚ್ಚಾದಾಗ ಪ್ರತಿಯೊಬ್ಬರ ಸರಾಸರಿ ಸಂಬಳ ನಂತರದ ದಿನಗಳಲ್ಲಿ ಎಷ್ಟಾಗುತ್ತದೆ?
ಎ) 4,500 ರೂ. ಬಿ) 7,500 ರೂ
ಸಿ) 6,200 ರೂ. ಡಿ) 6,250 ರೂ.

93) ರಮೇಶನು ಒಂದು ಸಾಲಿನ ಎಡ ಭಾಗದಿಂದ 8ನೇಯವನು. ರವಿಯು ಅದೇ ಸಾಲಿನಿಂದ ಬಲ ಭಾಗದಿಂದ 17ನೇಯವನು. ಇಬ್ಬರ ಸ್ಥಾನವನ್ನು ಅದಲು ಬದಲು ಮಾಡಿದಾಗ ರಮೇಶನ ಸ್ಥಾನವು ಎಡದಿಂದ 38ನೇ ಸ್ಥಾನವಾಗುತ್ತದೆ. ಹಾಗಾದರೆ ಈ ಸಾಲಿನಲ್ಲಿರುವವರ ಒಟ್ಟು ಸಂಖ್ಯೆ ಎಷ್ಟು?
ಎ) 59 ಬಿ) 55
ಸಿ) 46 ಡಿ) 54

94) ಒಂದು ಭಾಷೆಯಲ್ಲಿ ಸುವಾಸನೆಯನ್ನು ರುಚಿ ಎಂದು, ರುಚಿಯನ್ನು ಶ್ರವಣ ಎಂದು, ಶ್ರವಣವನ್ನು ನೋಟ ಎಂದು ಮತ್ತು ನೋಟವನ್ನು ಸುವಾಸನೆ ಎಂದು ಅರ್ಥೈಸಿದರೆ ಕಿವಿಗಳನ್ನು ಯಾವುದಕ್ಕಾಗಿ ಬಳಸಲಾಗುತ್ತದೆ?
ಎ) ರುಚಿ ಬಿ) ನೋಟ
ಸಿ) ಶ್ರವಣ ಡಿ) ಸುವಾಸನೆ

95) ರಾಜು ಎರಡು ಲ್ಯಾಪ್‌ಟಾಪ್ ಖರೀದಿಸಿದ್ದಾನೆ. ಮೊದಲನೆಯದನ್ನು 42, 500 ರೂ. ಮಾರಿ ಅದರ ಮೇಲೆ ಶೇ. 12 ರಷ್ಟು ಲಾಭಗಳಿಸಿದನು. ಇನ್ನೊಂದನ್ನು 36, 200 ರೂ. ಮಾರಿ ಅದರ ಮೇಲೆ ಶೇ. 12 ರಷ್ಟು ನಷ್ಟ ಅನುಭವಿಸಿದನು. ಹಾಗಾದರೆ ರಾಜುವಿಗೆ ಒಟ್ಟಾರೆ ಈ ವ್ಯವಹಾರದಲ್ಲಿ ಆದ ಲಾಭ ಅಥವಾ ನಷ್ಟ ಎಷ್ಟು?
ಎ) ರೂ. 756 ಲಾಭ ಬಿ) ರೂ. 756 ನಷ್ಟ
ಸಿ) ರೂ. 1,512 ಲಾಭ ಡಿ) ರೂ. 1,512 ನಷ್ಟ

96) ಒಂದು ಅಸಲು ಸರಳ ಬಡ್ಡಿಯಲ್ಲಿ ನಿರ್ದಿಷ್ಟ ದರದಲ್ಲಿ 3 ವರ್ಷಗಳಿಗೆ 850 ರೂ. ಮತ್ತು 4 ವರ್ಷಗಳಿಗೆ 925 ರೂ. ಆಗುತ್ತದೆ. ಹಾಗಾದರೆ ಅಸಲು ಎಷ್ಟು?
ಎ) 700 ರೂ. ಬಿ) 850 ರೂ.
ಸಿ) 925 ರೂ. ಡಿ) 625 ರೂ.

97) ಎರಡು ಸಂಖ್ಯೆಗಳ ಅನುಪಾತ 2 : 3 ಇದೆ. ಆ ಎರಡು ಸಂಖ್ಯೆಗಳಿಂದ 12 ನ್ನು ಕಳೆದಾಗ ಅವುಗಳ ಅನುಪಾತ 5 : 8 ಆಗುವುದು. ಹಾಗಾದರೆ ಆ ಎರಡು ಸಂಖ್ಯೆಗಳು ಯಾವುವು?
ಎ) 16 & 24 ಬಿ) 35 & 56
ಸಿ) 20 & 48 ಡಿ) 72 & 108

98) ರಾಮನು ಒಂದು ಭಾವ ಚಿತ್ರವನ್ನು ತೋರಿಸುತ್ತಾ ಹೀಗೆ ಹೇಳಿದನು. ಈ ಹುಡುಗಿ ನನ್ನ ತಾಯಿಯ ಮೊಮ್ಮಗನ ಪತ್ನಿ. ಹಾಗಾದರೆ ರಾಮನು ಆ ಹುಡುಗಿಗೆ ಏನಾಗಬೇಕು?
ಎ) ಪತಿ ಬಿ) ಅಜ್ಜ
ಸಿ) ತಂದೆ ಡಿ) ಮಾವ

99) ಇಂಗ್ಲೀಷ್ ವರ್ಣಮಾಲೆಯಲ್ಲಿ ಎಷ್ಟು ಅಕ್ಷರಗಳು ಸಮತಲ ದರ್ಪಣದಲ್ಲೂ ಅದೇ ರೀತಿ ಕಾಣುತ್ತವೆ?
ಎ) 14 ಬಿ) 11
ಸಿ) 09 ಡಿ) 18

100) ಪ್ರಸ್ತುತವಾಗಿ ಎ & ಬಿ ರವರ ಸರಾಸರಿ ವಯಸ್ಸು 32 ವರ್ಷಗಳು. ಸಿ ಯ ವಯಸ್ಸು ಸೇರಿದಾಗ ಮೂವರ ಸರಾಸರಿ ವಯಸ್ಸು 36 ಆಗುತ್ತದೆ. ಹಾಗಾದರೆ ಸಿ ನ ಪ್ರಸ್ತುತ ವಯಸ್ಸೆಷ್ಟು?
ಎ) 32 ವರ್ಷ ಬಿ) 38 ವರ್ಷ
ಸಿ) 40 ವರ್ಷ ಡಿ) 44 ವರ್ಷ

ಚಿಗುರು ಸ್ಪರ್ಧಾತ್ಮಕ ತರಬೇತಿ ಸಂಸ್ಥೆ
ID Square, 1ನೇ ಮಹಡಿ
ಧಾರವಾಡ-580001
7022473611



Scanned with CamScanner

www.shikarat.com

# ಚಿಗುರು ಸ್ಪರ್ಧಾತ್ಮಕ ತರಬೇತಿ ಸಂಸ್ಥೆ, ಧಾರವಾಡ

**Key Answers: ಮಾದರಿ ಪರೀಕ್ಷೆ – 89**  **Date: 22-05-2022**

| | | | | | | | | | |
|---|---|---|---|---|---|---|---|---|---|
| 1 | C | 21 | D | 41 | B | 61 | A | 81 | B |
| 2 | B | 22 | C | 42 | B | 62 | C | 82 | C |
| 3 | D | 23 | B | 43 | B | 63 | D | 83 | D |
| 4 | A | 24 | A | 44 | D | 64 | D | 84 | C |
| 5 | D | 25 | A | 45 | D | 65 | B | 85 | B |
| 6 | B | 26 | C | 46 | D | 66 | C | 86 | D |
| 7 | A | 27 | C | 47 | A | 67 | D | 87 | B |
| 8 | D | 28 | D | 48 | C | 68 | D | 88 | C |
| 9 | B | 29 | C | 49 | D | 69 | C | 89 | D |
| 10 | A | 30 | D | 50 | C | 70 | A | 90 | C |
| 11 | B | 31 | D | 51 | B | 71 | B | 91 | D |
| 12 | A | 32 | C | 52 | C | 72 | B | 92 | B |
| 13 | C | 33 | C | 53 | C | 73 | D | 93 | D |
| 14 | D | 34 | A | 54 | C | 74 | A | 94 | B |
| 15 | C | 35 | B | 55 | B | 75 | B | 95 | A |
| 16 | A | 36 | A | 56 | D | 76 | C | 96 | D |
| 17 | B | 37 | B | 57 | A | 77 | D | 97 | D |
| 18 | B | 38 | C | 58 | A | 78 | C | 98 | D |
| 19 | D | 39 | D | 59 | A | 79 | A | 99 | B |
| 20 | D | 40 | B | 60 | C | 80 | D | 100 | D |

Scanned with CamScanner